## ಚಿತ್ತ ಕೆತ್ತಿದ ಚಿತ್ರ

ಚಿದಾನಂದ ಸಾಲಿ

ಕಲೆ: ಮುರುಳೀಧರ ರಾಠೋಡ

# ಸೂರ್ಯನ ಕುದುರೆಯ ಹಡೇವೆಂಕಟನ ಬೆನ್ಹತ್ತಿ..

**ಎಷ್ಟೊಂದು** ಕಥೆ–ಕಾದಂಬರಿಗಳನ್ನು ಓದಿರುತ್ತೇವೆ ನಾವು ಬದುಕಿನುದ್ದಕ್ಕೂ? ಎಷ್ಟೊಂದು ಬಗೆಯ ಕಾಡುವ ಪಾತ್ರಗಳನ್ನು ಹಾದು ಬಂದಿರುತ್ತೇವೆ ದಾರಿಯುದ್ದಕ್ಕೂ? ಆ ಓದಿನ ಕಾಡಿನಲ್ಲಿ ಹೆಚ್ಚು ಕಾಡಿದ, ಹೆಚ್ಚು ಇಷ್ಟವಾದ ಒಂದು ನಿರ್ದಿಷ್ಟ ಪಾತ್ರದ ಬಗ್ಗೆ ಮಾತಾಡಿ ಎಂದಾಗ ಮನಸ್ಸಿನಲ್ಲಿ ಇಷ್ಟದ ಪಾತ್ರಗಳ ಮೆರವಣಿಗೆಯೇ ಹೊರಟು ಕೊನೆಗೆ ಒಂದು ಪಾತ್ರದ ಮೇಲೆ ಮನಸ್ಸು ನಿಲ್ಲುತ್ತದೆ. ಹಾಗೆ ನನ್ನ ಮನಸ್ಸು ನಿಂತುಕೊಂಡ ಪಾತ್ರ ಹಡೇವೆಂಕಟನದ್ದು.

ವೆಂಕಟಕೃಷ್ಣ ಜೋಯಿಸ ಎಂದರೆ ತಕ್ಷಣಕ್ಕೆ ಯಾರೆಂದರೆ ಯಾರಿಗೂ ನೆನಪಾಗದ ಈತ, 'ಹಡೆ ವೆಂಕಟ' ಎನ್ನುತ್ತಿದ್ದಂತೆ ಕನ್ನಡದ ಎಲ್ಲ ಪ್ರಾಜ್ಞ ಓದುಗರಿಗೆ ಅವನನ್ನೂ, ಆ ಕಥೆಯನ್ನೂ, ಆ ಕಥಾಸಂಕಲನದ ನೆನಪನ್ನೂ ಒಟ್ಟೊಟ್ಟಿಗೆ ತಂದುಕೊಡುತ್ತಾನೆ. ಪಾತ್ರವೊಂದು ತನ್ನನ್ನು ಸೃಷ್ಟಿಸಿದ ಕಥೆಗಾರನಂತೆಯೇ ತಾನೂ ಅಜರಾಮರನಾಗುವುದೆಂದರೆ ಇದುವೇ ಇರಬೇಕು.

ಯು.ಆರ್. ಅನಂತಮೂರ್ತಿಯವರ 'ಸೂರ್ಯನ ಕುದುರೆ' ಕಥೆಯ ಕಥಾನಾಯಕ ಹಡೆ ವೆಂಕಟನನ್ನು ಬದುಕಿನ ಯಾವ ಬಿಂದುವಿನಲ್ಲಿ ಎದುರುಗೊಂಡೆನೆಂಬುದು ಸ್ಪಷ್ಟವಾಗಿ ನೆನಪಿಲ್ಲ. ಆದರೆ ಉಸಿರಿರುವವರೆಗೆ ಆ ಪಾತ್ರ ಕಲಿಸಿದ ಜೀವನಪಾಠ ಮತ್ತು ಅಂಥ ಪಾತ್ರವನ್ನು ತಮ್ಮ ಸೃಜನಶೀಲತೆಯ ಶಿಖರಾಗ್ರ ಮನಃಸ್ಥಿತಿಯಲ್ಲಿ ಕೆತ್ತಿಟ್ಟ ಕಥೆಗಾರನ ಬಗೆಗಿನ ಮೆಚ್ಚುಗೆ ಬೆರೆತ ಅಚ್ಚರಿ ಮಾತ್ರ ಎಂದೆಂದಿಗೂ ಮಾಸುವಂಥವಲ್ಲ.

ಮೊದಲಿನ ಓದಿಗೆ ಹಡೆವೆಂಕಟ ಒಬ್ಬ ಪಲಾಯನವಾದಿಯಂತೆ ಕಂಡಿದ್ದ. ಆದರೆ, ಅವನ ಮುಗ್ಧ ಪ್ರಾಮಾಣಿಕತೆ ಮತ್ತು ಸಹಜತೆಗಳ ಬೆಳಕಲ್ಲಿಯೇ ಆಳವಾಗಿ ಇಳಿಯುತ್ತ ಹೋದಂತೆ ಇದು ಬದುಕಿನ ಸಮಸ್ಯೆಗಳಿಗೆ ಅವನು ಬೆನ್ನು ಮಾಡಿ ಓಡುತ್ತಿರುವ ಪಲಾಯನವಲ್ಲ; ಬದಲಿಗೆ ಆ ಸಮಸ್ಯೆಗಳಿಗೆ ಮುಖಾಮುಖಿಯಾಗಲು ಅವನು ಕಂಡುಕೊಂಡಿರುವ ಬೇರೊಂದೇ ಬಗೆಯ ಪರ್ಯಾಯ ಮಾರ್ಗ ಎನಿಸಿತು. ಕಾಲವನ್ನೇ ಸ್ತಬ್ಧಗೊಳಿಸಿಕೊಂಡಂತಿರುವ ವೆಂಕಟನ ನಿರ್ಲಿಪ್ತಿಯನ್ನು ನೇರವಾಗಿ ಎದುರಿಸಲಾಗದೆ ಹತಾಶಗೊಂಡು, ಆ ಹತಾಶೆ ಆಕ್ರೋಶವಾಗಿ ಪರಿವರ್ತಿತಗೊಂಡುದರಿಂದಲೇ ಅವನ ಮಗ ಸುಬ್ಬು ನೆಲ–ಮುಗಿಲುಗಳನ್ನು ಒಂದು ಮಾಡುವಂತೆ ಹಾರಾಡುತ್ತಿರುವುದೆನಿಸಿತು. ಓಡುನಡಿಗೆಯ ಮಹತ್ವಾಕಾಂಕ್ಷಿ ಮಗ ಮತ್ತು ನಿಧಾನ ನಡಿಗೆಯ ಸಂತೃಪ್ತ ಅಪ್ಪಂದಿರ ಈ ಮುಖಾಮುಖಿಯು ತಲೆಮಾರುಗಳ ನಡುವಿನ ಮನಃಸ್ಥಿತಿಯ ವ್ಯತ್ಯಾಸವನ್ನೂ ಸೂಚಿಸುತ್ತಿರುವಂತಿದೆ.

ನಿಜದಲ್ಲಿ ಈ ವೆಂಕಟನು ಗಂಡು ರೂಪದಲ್ಲಿರುವ ಮಾತೃಹೃದಯಿಹೆಣ್ಣು ಅನಿಸಿತು ನನಗೆಮರುಓದಿನಲ್ಲಿ. ಹಾಗಲ್ಲದೆ ಕುರುಡು ಪುತ್ರವಾತ್ಸಲ್ಯದಲ್ಲಿ ಅವನ ಹೆಂಡತಿ ರುಕ್ಕುವೂ; ಮಹತ್ವಾಕಾಂಕ್ಷೆಯ ಸ್ವಾರ್ಥದಲ್ಲಿ ಮಗನಾದ ಸುಬ್ಬುವೂ; ದಂಡಿ ದುಡ್ಡಿದ್ದೂ ಮೂರು ಹೊತ್ತು ಬೇಯಿಸಿ ಹಾಕುವವರಿಗೇ ಹೆಸರಿಡುತ್ತ, ಒಂದು ಚಿಕ್ಕಾಸಿನ ನೆರವನ್ನೂ ನೀಡದ ಜಿಪುಣಾಗ್ರೇಸರ ಶೇಷಣ್ಣನೂ ತಮ್ಮ ತಮ್ಮ ಸ್ವಭಾವದೋಷದ ಚಕ್ರಸುಳಿಯಲ್ಲಿ ಸಿಲುಕಿ ಮುಳುಗೇಳುತ್ತ ಇವನ ಸಹನೆಯನ್ನು ಕೆಣಕುತ್ತಿರುವಾಗಲೂ ಸ್ಥಿಮಿತ ಕಳೆದುಕೊಳ್ಳದೆ ಅವರೆಲ್ಲರನ್ನೂ ಅಪಾರ ಕರುಣೆ